

## 5

ಕೊನೆಯದಾಗಿ, ಇಂಡಿಯಾದಲ್ಲಿ ಇವತ್ತಿಗೂ ಸಾರ್ವಜನಿಕ ನಾಯಕರು ಗಾಂಧೀಜಿ ರೂಪಿಸಿಕೊಟ್ಟ ಉಪವಾಸ ಸತ್ಯಾಗ್ರಹವನ್ನು ಮತ್ತೆ ಮತ್ತೆ ಪ್ರಯೋಗಿಸುತ್ತಲೇ ಇದ್ದಾರೆ. ಆದರೆ ಈಚಿನ ದಶಕಗಳಲ್ಲಿ ಕೆಲವು ಬಗೆಯ 'ಉಪವಾಸ'ಗಳು ವ್ಯಕ್ತಿಯ ಆತ್ಮಪರೀಕ್ಷೆ ಹಾಗೂ ಸಮಾಜದ ಆತ್ಮಪರೀಕ್ಷೆಯ ಸಾಧನಗಳಾಗದೆ ಪಕ್ಷಪಾತದ ಅಥವಾ ಸ್ವಂತದ ರಾಜಕೀಯ ಲಾಭಗಳಿಂದ ಹುಟ್ಟಿದಂತಿವೆ. ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ನಡೆಸಿದ ಉಪವಾಸ ಸತ್ಯಾಗ್ರಹ ಕೂಡ ಒಂದು ಪಕ್ಷದ ಸರ್ಕಾರದ ವಿರುದ್ಧ ಕೆಲವು ಕಾರ್ಪೊರೇಟ್ ವಲಯಗಳ ಒತ್ತಾಸೆ ಹಾಗೂ ಮತ್ತೊಂದು ರಾಜಕೀಯ ಪಕ್ಷದ ಕುಮ್ಮಕ್ಕಿನಿಂದ ನಡೆದಿತ್ತೆಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. ಹಾಲಿ ಸರ್ಕಾರ ಲೋಕಪಾಲ ಮಸೂದೆಯನ್ನು ಕಸದ ಬುಟ್ಟಿಗೆ ಹಾಕಿರುವಾಗಲೂ ಅಣ್ಣಾ ಹಜಾರೆ ಕೇವಲ ಸಾಂಕೇತಿಕ ಸತ್ಯಾಗ್ರಹ ಮಾಡಿ ಸುಮ್ಮನಾದದ್ದನ್ನು ಕಂಡ ಮೇಲಂತೂ ಈ ಅನುಮಾನ ಇನ್ನಷ್ಟು ಖಾತ್ರಿಯಾಗಿದೆ. ಅರವಿಂದ ಕೇಜ್ರಿವಾಲ್ ಕೂಡ ಉಪವಾಸವನ್ನು ಸ್ವಾರ್ಥಕ್ಕಾಗಿ ಬಳಸಿದ್ದರೂ ಕೇಂದ್ರ ಸರ್ಕಾರವನ್ನು ಮಣಿಸಲು ಧರಣಿ ಸತ್ಯಾಗ್ರಹದ ಅಸ್ತ್ರವನ್ನು ಪರಿಣಾಮಕಾರಿಯಾಗಿ ಬಳಸಲೆತ್ನಿಸಿದ್ದಾರೆ. ಈ ಬರಹ ಬರೆಯುವ ವೇಳೆಗೆ, ಪಾಟೀದಾರ್ ಮೀಸಲಾತಿ ಹೋರಾಟ ಕಟ್ಟಿರುವ ತರುಣ ನಾಯಕ ಹಾರ್ದಿಕ್ ಪಟೇಲ್ ಕೂಡ ಉಪವಾಸ ಮಾಡುತ್ತಿದ್ದಾರೆ; ಪಟೇಲ್ ಉಪವಾಸ ಅವರ ಮುಂದಿನ ರಾಜಕೀಯ ಪ್ರವೇಶದ ರಿಹರ್ಸಲ್ಲಿನಂತೆ ಕಂಡರೂ, ಈ ಉಪವಾಸ ಅವರಿಗೆ ವ್ಯವಸ್ಥೆಯ ಜಡತೆ ಹಾಗೂ ನಿರ್ದಯತೆಗಳ ಬಗ್ಗೆ ಹಲವು ಪಾಠಗಳನ್ನು ಕಲಿಸಿರಬಹುದೇನೋ.

ಇದೇ ಅಕ್ಟೋಬರ್ ಎರಡರಂದು ಗಾಂಧೀಜಿ ಹುಟ್ಟಿ ನೂರೈವತ್ತು ವರ್ಷವಾಗಲಿರುವ ನೆನಪಿನ ಆಚರಣೆಯಲ್ಲಿ ತೊಡಗಲಿರುವ ಅನೇಕ ಸರ್ಕಾರಗಳು, ಸಂಸ್ಥೆಗಳು, ಅವುಗಳಲ್ಲಿ ಭಾಷಣ ಬಿಗಿಯಲಿರುವ ಅನೇಕ ನಾಯಕರು ಗಾಂಧೀಜಿಯ ಹೆಸರು ಹೇಳಲು ಕೂಡ ಯೋಗ್ಯತೆಯುಳ್ಳವರಲ್ಲ, ನಿಜ. ಆದರೆ ಎಲ್ಲ ಮನುಷ್ಯರಿಗೂ ಎದುರಾಗಬಹುದಾದ ಯಾವುದೋ ಒಂದು ಸತ್ಯಶೋಧಕ ಗಳಿಗೆಯಲ್ಲಿ ಅಥವಾ ಅಸಹಾಯಕತೆಯಲ್ಲಿ ಗಾಂಧಿಯನ್ನೂ ಎಲ್ಲರೂ ಹುಡುಕಿಕೊಳ್ಳಬೇಕಾಗುತ್ತದೆ. ಇವತ್ತಿನ ಹಿಂಸಾಪ್ರಿಯ ಜಗತ್ತು ಗಾಂಧೀಜಿಯನ್ನು ಮತ್ತೆ ಹುಡುಕಿಕೊಳ್ಳದಿದ್ದರೆ ಯಾರಿಗೂ ಉಳಿಗಾಲವಿಲ್ಲ. ಈ ಅನಿವಾರ್ಯ ಎಚ್ಚರ ಲೋಕದಲ್ಲಿ ಎಲ್ಲರಲ್ಲೂ ಮತ್ತೆ ಹುಟ್ಟಲು ಈ 'ಗಾಂಧೀಜಿ – 150'ರ ಸಂದರ್ಭ ಒಂದು ನಿರ್ಣಾಯಕ ಜಾಗತಿಕ ಚಳವಳಿಯನ್ನೇ ರೂಪಿಸುವಂತಾಗಲಿ.

### ನಟರಾಜ್ ಹುಳಿಯಾರ್

ಕವಿ, ಕತೆಗಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್ಸ್‌ಪಿಯರ್ ಮನೆಗೆ ಬಂದ' (ನಾಟಕ), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ) ಅವರ ಕೆಲವು ಪುಸ್ತಕಗಳು. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.